# ನೆಲ ಸಪಾಟಿಲ್ಲ

ಕೆರೆ ಎನ್ನುವುದಕ್ಕೆ ಎರಡು ಅರ್ಥ. ಒಂದು ನೀರು ನಿಲ್ಲುವ ವಿಶಾಲ ಭೂಪ್ರದೇಶ. ಇನ್ನೊಂದು ಅರ್ಥ, ಕೆರೆತಕ್ಕೆ ಸಂಬಂಧಿಸಿದ್ದು. ದೇಹದ ಯಾವುದಾದರೂ ಭಾಗದಲ್ಲಿ ತುರಿಕೆಯುಂಟಾದಾಗ, ಬೆರಳುಗಳಿಂದ ಕೆರೆದು ಆ ನವೆಯನ್ನು ಶಮನಗೊಳಿಸಿಕೊಳ್ಳುತ್ತೇವೆ. ಈ ಕೆರೆತ ಕೆರೆಗೆ ಸಂಬಂಧಿಸಿದಂತೆಯೂ ಆಗಾಗ ಚಾಲ್ತಿಯಲ್ಲಿರಬೇಕು. ಕೆರೆಯನ್ನು ಕೆರೆಯದೆ ಹೋದರೆ, ಹೂಳು ತುಂಬಿಕೊಂಡು ತನ್ನ ಚಹರೆ ಕಳೆದುಕೊಳ್ಳುತ್ತದೆ. ಕೆರೆತವೆನ್ನುವುದು ಕೆರೆಯ ಪಾಲಿಗೆ ಆರೋಗ್ಯಕರ ಚಟುವಟಿಕೆ.

ಪ್ರತಿ ವರ್ಷದ ಬೇಸಗೆಯಲ್ಲಿ ಕೆರೆಯನ್ನು ಕೆರೆಯುವ ಕಾರ್ಯಾಚರಣೆಯಲ್ಲಿ ರೈತರು ತೊಡಗಿಕೊಳ್ಳುವುದು ನಮ್ಮ ಕೃಷಿಸಂಸ್ಕೃತಿಯ ಒಂದು ಭಾಗ. ಕೆರೆಯ ಹೂಳು ಹೊಲದ ಪಾಲು. ಹೊಲದ ಮಣ್ಣಿನ ಪೌಷ್ಟಿಕತೆಯನ್ನು ಕೆರೆಯ ಹೂಳು ಹೆಚ್ಚಿಸುವುದು. ಹೂಳು ತೆಗೆಯುವುದರಿಂದಾಗಿ ಕೆರೆಯ ನೀರಿನ ಸಂಗ್ರಹದ ಸಾಮರ್ಥ್ಯ ಉತ್ತಮಗೊಳ್ಳುವುದರೊಂದಿಗೆ, ಹೊಲಗಳ ಫಲವತ್ತತೆಯೂ ಹೆಚ್ಚುವುದು. ಮಳೆ ಕೊರತೆಯ ಸಂದರ್ಭದಲ್ಲಂತೂ ಕೆರೆಯ ಹೂಳು ತೆಗೆಯುವುದು, ನೀರಪಾತ್ರಗಳನ್ನು ಜತನವಾಗಿರಿಸಿಕೊಳ್ಳುವ ಕಾಳಜಿಯಾಗಿರುವುದರ ಜೊತೆಗೆ, ಊರ ಜನರಿಗೆ ಕೆಲಸ ಒದಗಿಸುವ ಚಟುವಟಿಕೆಯೂ ಹೌದು. ಬರದ ತೀವ್ರತೆಯನ್ನು ಕೊಂಚವಾದರೂ ತಗ್ಗಿಸುವ ಉಪಾಯಗಳಲ್ಲಿ ಕೆರೆಯನ್ನು ಹೂಳುಮುಕ್ತವಾಗಿರಿಸಿಕೊಳ್ಳುವುದೂ ಒಂದು.

ಊರಿಗೊಂದು ಕೆರೆ ಎನ್ನುವುದು ನಮ್ಮ ಗ್ರಾಮರಚನೆಯ ಮೂಲಭೂತ ಸಂಗತಿಗಳಲ್ಲೊಂದು. ವ್ಯಕ್ತಿಗೂ ಒಂದು ಕೆರೆ ಬೇಕಲ್ಲವೆ?

ಮನುಷ್ಯನ ಪಾಲಿಗೆ ಮನಸ್ಸೇ ಕೆರೆ. ಅಂತರಂಗ, ಅಂತಃಕರಣವೇ ಜೀವಜಲ. ಕೆರೆಯ ಹೂಳಿನಂತೆ ಮನಸ್ಸಿನ ರಾಡಿಯನ್ನೂ ಆಗಾಗ ಕೆರೆದು ತೆಗೆಯುತ್ತಿರಬೇಕು. ಆಗ, ಮನಸ್ಸು ನಿರ್ಮಲವಾಗಿರುವುದು ಸಾಧ್ಯ. ಆ ನೈರ್ಮಲ್ಯದಿಂದ ಬದುಕಿನ ಸೌಂದರ್ಯದ ಹೊಳಪು ದೊರೆಯುವುದು.

ಕೆರೆಯಲ್ಲಿನ ನೀರು ಅಥವಾ ಮನಸ್ಸಿಗೆ ಸಂಬಂಧಿಸಿದ ಅಂತಃಕರಣ – ಎರಡೂ ನಾಣ್ಯವೊಂದರ ಎರಡು ಮುಖಗಳು. ಎರಡರ ಉದ್ದೇಶ ಒಂದೇ, ವ್ಯಕ್ತಿ ಹಾಗೂ ಸಮಷ್ಟಿಯನ್ನು ಪೊರೆಯುವುದು. ದುರದೃಷ್ಟವಶಾತ್, ಈ ಜೀವಜಲವನ್ನು ಕೆಲವೊಮ್ಮೆ ಬಗ್ಗಡಗೊಳಿಸುವ ಮೂಲಕ, ತಾರತಮ್ಯವನ್ನು ಆರೋಪಿಸುತ್ತೇವೆ. ದಾಹ ತಣಿಸುವುದು ಪುಣ್ಯದ ಕಾರ್ಯ ಎಂದು ನಂಬುವ ನೆಲದಲ್ಲೇ, ಸಾರ್ವಜನಿಕ ನಳದಿಂದ ನೀರು ಕುಡಿದ ವ್ಯಕ್ತಿಯನ್ನು ಥಳಿಸಿ ಕೊಂದ ಘಟನೆ ಜರುಗುತ್ತದೆ. ದಲಿತ ಮಹಿಳೆ ನೀರು ಕುಡಿದ ಕಾರಣಕ್ಕಾಗಿ ಟ್ಯಾಂಕ್‌ನಲ್ಲಿನ ನೀರನ್ನೆಲ್ಲ ಖಾಲಿ ಮಾಡಿ, ಸ್ವಚ್ಛಗೊಳಿಸುವ ಪ್ರಹಸನ ನಡೆಯುತ್ತದೆ. ಒಂದು ಬೊಗಸೆ ನೀರು ದಾಹ ತಣಿಸುತ್ತದೆ; ಪ್ರೀತಿಗೆ ಕಾರಣವಾಗುತ್ತದೆ; ಸಾವಿಗೂ ನೋವಿಗೂ ಕಾರಣವಾಗುತ್ತದೆ. ಹಾಗಿದ್ದರೆ, ನೀರಿನ ನಿಜರೂಪು ಯಾವುದು: ಮಾನವೀಯತೆಯೋ? ಮೃತ್ಯುರೂಪವೋ? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ ಗೋಪಾಲಕೃಷ್ಣ ಅಡಿಗರ 'ನೆಲ ಸಪಾಟಿಲ್ಲ' ಕವಿತೆಯನ್ನು ಪರಿಶೀಲಿಸಬಹುದು.

ಕವಿತೆ ಶುರುವಾಗುವುದು, 'ನೆಲ ಸಪಾಟಿಲ್ಲ' ಎನ್ನುವ ಉದ್ಗಾರದೊಂದಿಗೆ. ಯಾಕಾಗಿ ಸಪಾಟಿಲ್ಲ? ಕವಿ ಕಾರಣಗಳನ್ನು ಪಟ್ಟಿ ಮಾಡುತ್ತಾರೆ: 'ನೆಲ ಸಪಾಟಿಲ್ಲ: ಹೊಳೆ, ಕೆರೆ, ಬಾವಿ, ಹಳ್ಳ, ಕೊಳ್ಳ, / ಗೊಬ್ಬರ ಗುಂಡಿ – ಹೀಗೆ / ತಗ್ಗುಗಳು, ಏರುಗಳು, ಮುಗ್ಗರಿಸುವುದು ಸಹಜ. / ತಗ್ಗುಗಳಲ್ಲಿ ನೀರು ತುಂಬುತ್ತದೆ. ಸಕಲ ಕುಂಡೀ ತೀರ್ಥ / ಯಾರಿಗೂ ಬೇಡ. ಹರಿವ ನೀರೆಂಥದೇ ಇರಲಿ ಯಾವುದೇ ಅಭ್ಯಂತರಗಳಿಲ್ಲ.'

ತಗ್ಗುಗಳು ಏರುಗಳು ಇರುವುದರಿಂದ ಮುಗ್ಗರಿಸುವುದು ಸಹಜ ಎನ್ನುತ್ತದೆ ಕವಿತೆ. ಅಂದರೆ, ಸಮಾಜದಲ್ಲಿನ ಏರುಪೇರುಗಳು ಸಹಜವೆಂದು ಕವಿತೆ ಹೇಳುತ್ತಿದೆಯೆ?

ಕವಿತೆ ಮುಂದುವರೆಯುತ್ತದೆ:

'ಬಾವಿಯ ನೀರು ಕುಡಿಯಲಾಗುತ್ತದೆ, ಕೆಸರು ತುಂಬಿದ್ದರೂ, ಪಾಚಿ ಮುಚ್ಚಿದ್ದರೂ ಕೂಡ. / ಆದರೆ ಎಷ್ಟೊಂದು ಭವ್ಯವಿದ್ದರೂ ಕೂಡ ಕಡಲ ನೀರ ಕುಡಿಯಲಾಗುವುದಿಲ್ಲ. / ನೀರಿನ ಮೇಲೆ ಜಗದಾತ್ಮ ಸೂರ್ಯನ ಲಕ್ಷ ಲಕ್ಷ ಕೈ ಆಡತೊಡಗಿದರೆ / ಜಮ್ಮು, ಕಂಪನ, ರೂಪಚ್ಛೇದ, ರೂಪಾಂತರ; / ಆವಿಯಾದಾಗಲೇ ನೀರು / ಶುದ್ಧ ಸ್ವರೂಪ, ಆಕಾಶ ಪ್ರತಾಪ, ವಿದ್ಯುದ್ದೀಪ, ಧಾರಾಕಾರ ಸೇಕ.'

ಸ್ವರೂಪ ಒಂದೇ ಬಗೆಯದಾಗಿದ್ದರೂ, ನೀರಿನ ರುಚಿ ಭಿನ್ನವಷ್ಟೇ. ಸಮುದ್ರ ಎಷ್ಟೇ ಭವ್ಯವಾಗಿದ್ದರೂ, ಕುಡಿಯಲಿಕ್ಕೆ ಬಾವಿಯ ನೀರೇ ಬೇಕು ಎನ್ನುವ ಕವಿತೆ, ಸೂರ್ಯ ಸ್ಪರ್ಶದಿಂದ ನೀರು ಪಡೆಯುವ ರೂಪಾಂತರಗಳನ್ನು ಚಿತ್ರಿಸುತ್ತದೆ. ಆ ರೂಪಾಂತರದ ಕೊನೆಯಲ್ಲಿ—

'ಆಕಾಶ ಸೇರಿದರೆ ಅಲ್ಲಿ ಹೊಂಡದ ನೀರು, ತೀರ್ಥ, ಬಾವಿಯ ನೀರು / ಕಡಲುಪ್ಪು ನೀರು. ಚರಂಡಿಯಲ್ಲಿ ಕೊಳೆಯುವ ನೀರು / ಎಲ್ಲ ಒಂದಾಗುವುದು; / ಜಾತಿ ಎಲ್ಲಿದೆ ಹೇಳು? ಇಲ್ಲಿ ಮಣ್ಣಲ್ಲಿ ನೆಟ್ಟಾಗ.'

ಸೂರ್ಯ ಸ್ಪರ್ಶದಿಂದ ಎಲ್ಲ ಬಗೆಯ ನೀರು ಆವಿಯಾಗಿ, ಆಗಸದಲ್ಲಿ ಒಂದಾಗಿ, ಏಕವಾಗುವುದು. ಅದೇ ನೀರು, ಮಳೆಯಾಗಿ ಭೂಮಿ ಸೇರಿದಾಗ ತಾನು ಸೇರುವ ಸ್ಥಳಕ್ಕೆ ತಕ್ಕಂತೆ ಮಹತ್ವ ಪಡೆಯುವುದು; ಮಣ್ಣಿನ ಸಂಸರ್ಗದೊಡನೆ ತಾರತಮ್ಯದ ಗುಣ ನೀರಿನದಾಗುವುದು.

ಕೊಂಚ ಎಚ್ಚರತಪ್ಪಿ ಓದಿಕೊಂಡರೂ, ಜಾತೀಯತೆ ಸಹಜವೆಂದು ಕವಿತೆ ಪ್ರತಿಪಾದಿಸುತ್ತಿದೆ ಎನ್ನುವ ತೀರ್ಮಾನಕ್ಕೆ ಬರುವುದು ಸಾಧ್ಯವಿದೆ. ಆದರೆ, ಕವಿತೆ ಧ್ವನಿಸುತ್ತಿರುವುದೇ ಬೇರೆ. 'ಜಾತಿ ಎಲ್ಲಿದೆ ಹೇಳು? ಇಲ್ಲಿ ಮಣ್ಣಲ್ಲಿ ನೆಟ್ಟಾಗ' ಎನ್ನುವ ಮಾತು ಸೂಚಿಸುತ್ತಿರುವುದು, ಮಣ್ಣಿನ ಗುಣವನ್ನಲ್ಲ; ಮನುಷ್ಯನ ಗುಣವನ್ನು. ಮನುಷ್ಯನ ಹಸ್ತಕ್ಷೇಪ ಯಾವುದನ್ನು ಬೇಕಾದರೂ ಮಲಿನಗೊಳಿಸಬಲ್ಲದು; ಮಾಲಿನ್ಯರೂಪಿ ಮಣ್ಣು ತುಂಬಿಕೊಂಡ ಮನಸ್ಸು ತಾರತಮ್ಯಗಳನ್ನು ಸೃಷ್ಟಿಸಬಲ್ಲದು. ನಮಗೆ ಬೇಕಾಗಿರುವುದು, ನೀರು ಯಾವ ಸ್ಥಳದಲ್ಲಿದ್ದರೂ ತರತಮವೆಣಿಸದ ಸೂರ್ಯನ ಮನೋಭಾವ. ನೀರಿನಲ್ಲಿ ಕಂಪನ, ರೂಪಾಂತರ ಉಂಟು ಮಾಡಬಲ್ಲ ಸೂರ್ಯಶಕ್ತಿ ನಮ್ಮ ಮನಸ್ಸಿಗೂ ಇದೆ. ಬೇಕಾದುದು ಇಚ್ಛಾಶಕ್ತಿಯಷ್ಟೇ. ನೆಲವೆಂಬ ಪ್ರಕೃತಿ ಸಪಾಟಾಗದಿರುವುದು ಸಹಜ. ಮನುಷ್ಯಪ್ರಕೃತಿ ಏರುಪೇರುಗಳನ್ನು ಹೊಂದಿರುವುದೂ ಸಹಜ. ಆ ಏರುಪೇರುಗಳು ಅಂತಃಕರಣವೆಂಬ ಅಂತರ್ಜಲದಿಂದ ಸಪಾಟುಗೊಳ್ಳಬೇಕು. ಆಗ ಸಮಾಜದಲ್ಲಿ ಸೌಂದರ್ಯ ಹಾಗೂ ಸೌಹಾರ್ದ.

■ **ಚಂಪಕಮಾಲಾ**

## ಮಾತೇ ಮುತ್ತು

- ನಾಳೆಯ ನಂತರ ಏನು ಮಾಡಬಹುದೋ ಅದನ್ನು ನಾಳೆಯವರೆಗೆ ಮುಂದೂಡಬೇಡಿ.
  —ಮಾರ್ಕ್ ಟ್ವೇನ್
- ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು. ರಸವೆ ಜನನ, ವಿರಸ ಮರಣ, ಸಮರಸವೇ ಜೀವನ!
  —ದ.ರಾ. ಬೇಂದ್ರೆ
- ಪ್ರಾಮಾಣಿಕ ಟೀಕೆ ಟಿಪ್ಪಣಿ ಆರೋಗ್ಯಪೂರ್ಣವಾದ ಗುಣ.
  —ಮಹಾತ್ಮ ಗಾಂಧಿ
- ಉತ್ತಮವಾದುದು ಶ್ರಮವಿಲ್ಲದೆ ಲಭಿಸದು, ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಅಲ್ಲ
  —ಕುವೆಂಪು
- ತಾಯಿ ಇಲ್ಲದ ತವರಿಗೆ ಮಗಳು ಬಂದರೆ ಉರಿಬೇಸಗೆಯಲ್ಲಿ ಮರಳುಗಾಡಿಗೆ ಬಂದಂತೆ.
  —ಅನಕೃ
- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.
  —ಎಸ್.ಎಲ್. ಭೈರಪ್ಪ
- ಪ್ರಾಣಿ ಜೀವನ ಮಿತವಾದದು, ಮನುಷ್ಯ ಜೀವನ ಬಹುಮುಖವಾದದು.
  —ಶಿವರಾಮ ಕಾರಂತ